# ನಾಲ್ವಡಿ ಮತ್ತು ಕನ್ನಂಬಾಡಿ



## ಜನಪ್ರಿಯ ಮತ್ತು ಜನಪರ ಅರಸನ 'ಕೆಆರ್‌ಎಸ್ ಅಧ್ಯಾಯ'ದ ಕಥನ

**ಕೃಷ್ಣರಾಜ ಸಾಗರ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಪ್ರತ್ಯೇಕಿಸಿ ನೋಡುವುದು ಸಾಧ್ಯವಿಲ್ಲ. ನಾಲ್ವಡಿ ಅವರ ಅಂತಃಕರಣವೇ ಮೈದಳೆದು ಕನ್ನಂಬಾಡಿ ಕಟ್ಟೆಯಾದಂತಿದೆ. ಕನ್ನಂಬಾಡಿ ಕಟ್ಟೆಯ ನಿರ್ಮಾಣದ ಕಥನದ ನೆಪದಲ್ಲಿ ನಾಲ್ವಡಿ ಅವರ ಕುರಿತ ವಿಶಿಷ್ಟ ಸಂಗತಿಗಳನ್ನು ಈ ಅಧ್ಯಯನ ಬರಹ ಕಟ್ಟಿಕೊಡುತ್ತಿದೆ.**

■ **ಟಿ.ಆರ್. ಅನಂತರಾಮು**

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಕುರಿತು ದಂತಕಥೆಗಳೇ ಇಲ್ಲ; ಇರುವುದೆಲ್ಲ ನೈಜ ಸಂಗತಿಗಳೇ. ಅವರು ಕಲೆಯನ್ನು ಉತ್ತೇಜಿಸಿದಂತೆಯೇ ಸಾಹಿತ್ಯವನ್ನು ಉತ್ತೇಜಿಸುತ್ತಿದ್ದರು; ಉಪನ್ಯಾಸಗಳನ್ನು ಕೇಳುತ್ತಿದ್ದರು, ಅದರಲ್ಲೂ ಧಾರ್ಮಿಕ, ಐತಿಹಾಸಿಕ ಉಪನ್ಯಾಸಗಳೆಂದರೆ ಮೈಸೂರಿನಲ್ಲಾದರೆ ಜಗನ್ಮೋಹನ ಅರಮನೆಯಲ್ಲಿ, ಬೆಂಗಳೂರಿನಲ್ಲಾದರೆ ಬೆಂಗಳೂರು ಅರಮನೆಯಲ್ಲಿ ಅವರಿಗಾಗಿ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿತ್ತು. ಸಾಹಿತಿಗಳ ಪೈಕಿ ಪ್ರೊ. ಸಿ.ಕೆ. ವೆಂಕಟರಾಮಯ್ಯನವರು ಮಹಾರಾಜರಿಗಾಗಿ ಬೆಂಗಳೂರು ಅರಮನೆಯಲ್ಲಿ ಅನೇಕ ಉಪನ್ಯಾಸಗಳನ್ನು ಕೊಡುತ್ತಿದ್ದರು. ಹೇಳುವ ವಿಷಯವನ್ನು ಸಮಯದ ಚೌಕಟ್ಟಿಗೆ ಹೊಂದಿಸಿಕೊಂಡು ಉಪನ್ಯಾಸ ಕೊಡಬೇಕಾಗಿತ್ತು. ಎಷ್ಟೋವೇಳೆ, ಉಪನ್ಯಾಸದ ಅವಧಿ ಎಷ್ಟಿರಬೇಕೆಂದು ನಾಲ್ವಡಿಯವರೇ ನಿರ್ಧರಿಸುತ್ತಿದ್ದರು. ಒಮ್ಮೆ ಸಿ.ಕೆ. ವೆಂಕಟರಾಮಯ್ಯನವರು ಉಪನ್ಯಾಸ ಕೊಡುವಾಗ ಎದುರಿಗಿದ್ದ ಗಡಿಯಾರವೇ ಮಾಯವಾಗಿತ್ತು. ಎಲ್ಲಿ ಸಭಾಮರ್ಯಾದೆ ಮೀರಿ ಉಪನ್ಯಾಸ ವಿಸ್ತರಿಸುತ್ತದೋ ಎಂಬ ಅಳುಕಿನಿಂದಲೇ ವೆಂಕಟರಾಮಯ್ಯನವರು ಗಡಿಯಾರದ ಕಡೆಗೆ ಕಣ್ಣಾಡಿಸುತ್ತಿದ್ದುದನ್ನು ನಾಲ್ವಡಿಯವರು ಗಮನಿಸಿದ್ದರು. 'ಗಡಿಯಾರ ನೋಡಬೇಡಿ, ಅದು ಅಲ್ಲಿಲ್ಲ. ತೆಗೆಸಿ ಹಾಕಿದ್ದೇವೆ. ಉಪನ್ಯಾಸ ಮುಂದುವರಿಯಲಿ' ಎಂದು ತದೇಕಚಿತ್ತರಾಗಿ ಎಂದಿನ ಗಾಂಭೀರ್ಯದಲ್ಲಿ ಉಪನ್ಯಾಸ ಕೇಳುತ್ತಿದ್ದರು. ಆ ದಿನ ಉಪನ್ಯಾಸ ದೀರ್ಘವಾಗಿಯೇ ಇತ್ತು. ನಾಲ್ವಡಿಯವರು ಆ ಕುರಿತು ಬೇಸರ ಮಾಡಿಕೊಳ್ಳಲಿಲ್ಲ. ಬದಲು 'ಸಮುದ್ರದಲ್ಲಿ ಈಜುತ್ತಿದ್ದವರು ಕಾಲವನ್ನು ನೆನಪಿಸಿಕೊಂಡು ಕಾಲುವೆಗೆ ತಿರುಗುವುದೇಕೆ? ಆ ಕಾರಣಕ್ಕಾಗಿ ಗಡಿಯಾರ ತೆಗೆಸಿದ್ದೇವೆ' ಎಂದರು. ಇಂಥ ಉಪಮೆಗಳನ್ನು ಸಂದರ್ಭ ಬಂದಾಗಲೆಲ್ಲ ನಾಲ್ವಡಿಯವರು ಧಾರಾಳವಾಗಿ ಕೊಡುತ್ತಿದ್ದರು; ಲೋಕವ್ಯವಹಾರ ಬಲ್ಲ ನಿಪುಣರು.

ಬಹುಶಃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಕುರಿತು ಯದುವಂಶದ ಬೇರಾವ ರಾಜರಿಗೂ ಇಲ್ಲದಷ್ಟು ಲೇಖನಗಳು, ಕೃತಿಗಳು ಬಂದಿವೆ. ಅವರನ್ನು ವೈವಿಧ್ಯಮಯ ಗುಣವಾಚಕಗಳಿಂದ ಸಂಬೋಧಿಸಲಾಗಿದೆ. ಅವರ ಸಾಧನೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಅವರು ಮೈಸೂರು ರಾಜ್ಯವನ್ನು ಆಳಿದ್ದು ದೀರ್ಘಕಾಲವೇ (1902–1940). ಅಂತೆಯೇ ಅವರ ಸಾಧನೆಯ ಪಟ್ಟಿಯೂ ದೀರ್ಘವೇ. ಹಾಗೆ ನೋಡಿದರೆ ಅವರ ಕೊಡುಗೆಗಳನ್ನು ಪಟ್ಟಿಮಾಡುತ್ತ ಹೋದರೆ, ಯಾವುದಾದರೊಂದು ಪ್ರಮುಖ